Sri B. B. SAYANAK.—May I know whether the Minister is aware that only the village limits of Angol is merged in Belgaum City, but not the agricultural lands ?

Sri P. M. NADGOUDA.—From 1967 the City Municipality of Belgaum has extended its limit to Angol Town Panchayat.

Sri B. B. SAYANAK.—What I mean to say is that only the village limits are included in the City Municipality but not the agricultural lands. Am I correct ?

Sri P. M. NADGOUDA.—When the Town Panchayat is included, the roads and bunds are also included.

Sri B. B. SAYANAK.—The Hon. Minister is giving a wrong answer. What I mean is that only the village Panchayat is merged in Belgaum City but not the agricultural lands. He is saying something else.

Sri P. M. NADGOUDA.—I have understood the point. When the village is merged in Belgaum City, the entire jurisdiction of the village will have to be merged.

Training of Harijans in Fishing

75. Sri A. RAMACHANDRA (Sulya).—

Will the Minister of State for Ports and Fisheries be pleased to state:—

the number of Harijans in the State to whom training in fishing has been given so far ?

Sri H. C. LINGA REDDY (Minister of State for Ports and Fisheries).—

89.

ಶ್ರೀ ಎ. ರಾಮಚಂದ್ರ.—89 ಜನ ಹರಿಜನರಿಗೆ ಮೀನು ಹಿಡಿಯುವ ಬಗ್ಗೆ ತರಪೇತಿ ನೀಡಲಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜನರಿಗೆ ಈ ರೀತಿ ತರಪೇತಿ ನೀಡಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹರಿಜನರಿಗೆ ತರಪೇತಿ ಕೊಟ್ಟಂತೆ ಉಳಿದವರಿಗೂ ಸಹ ತರಪೇತಿ ಕೊಡಲಾಗಿದೆ.

ಶ್ರೀ ಎ. ರಾಮಚಂದ್ರ.—ಉಳಿದವರಿಗೂ ಸಹ ತರಪೇತಿ ಕೊಡಲಾಗಿದೆ ಎಂದು ಹೇಳಿದರೆ ನನಗೆ ಅರ್ಥವಾಗಲಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟು 89 ಜನ ಹರಿಜನರಿಗೆ ಮೀನು ಹಿಡಿಯುವ ಬಗ್ಗೆ ತರಪೇತಿ ನೀಡಲಾಗಿದೆಯೆಂದು ಉತ್ತರದಲ್ಲಿ ಹೇಳಿದೆ. ಒಟ್ಟಿನಲ್ಲಿ ಇನ್‌ಲೆಂಡ್ ಫಿಷರೀಸ್‌ನಲ್ಲಿ 150 ಜನರಿಗೆ ಮತ್ತು ಮೆರೈನ್ ಫಿಷರೀಸ್‌ನಲ್ಲಿ 1,405 ಜನರಿಗೆ ತರಪೇತಿ ನೀಡಲಾಗಿದೆ. ಅಂದರೆ ಒಟ್ಟು 1,555 ಜನರಿಗೆ ತರಪೇತಿ ಕೊಡಲಾಗಿದೆ,

ಶ್ರೀ ಹೆಚ್. ಪುಟ್ಟದಾಸ.—ತರಬೇತಿ ಪಡೆದಿರುವ ಹರಿಜನರಿಗೆ ಅವರು ಆ ವ್ಯತ್ತಿಯನ್ನು ಅವಲಂಬನೆ ಮಾಡಲು ಸರಕಾರ ಕೊಟ್ಟಿರುವ ಸೌಲಭ್ಯಗಳೇನು ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಬೆರಿನ್ ಫಿಷರೀಸ್‌ನಲ್ಲಿ ತರಬೇತಿ ಪಡೆದಿರುವವರು ಮೂರು ನಾಲ್ಕು ಜನರು ಸೇರಿ ಗ್ರೂಪ್ ಮಾಡಿಕೊಂಡು ಬಂದಮೇಲೆ ಅವರಿಗೆ ಬೋಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ. ಅವರಿಗೆ ಲೋನುಗಳು ಹಾಗೂ ಸಬ್‌ಸಿಡಿ ರೂಪದಲ್ಲಿ ಬೋಟುಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡಿ ಆ ನಂತರ ಕಂತುಗಳಲ್ಲಿ ಸಾಲವನ್ನು ಮರುಪಾವತಿ ಮಾಡುವ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಸುಮಾರು 150 ಜನರಿಗೆ ಟ್ರೈನಿಂಗು ಕೊಡಲಾಗಿದೆ. ಹಾಗೆ ಟ್ರೈನಿಂಗು ಪಡೆದು ಬಂದ ಮೇಲೆ ಅಂತಹವರನ್ನು ಅಲ್ಲಲ್ಲಿ ಅಪರೇಟರು ಗಳಾಗಿ, ಅಸಿಸ್ಟೆಂಟು ಇಂಡಸ್ಟ್ರಿಯಲ್ ಇನ್‌ಸ್ಪೆಕ್ಟರುಗಳಾಗಿ ಹಾಗೂ ನಾನ್ ಎಸ್.ಎಸ್.ಎಲ್.ಸಿ. ಆಗಿರುವಂತಹವರಿಗೆ ವಾಚ್‌ಮನ್‌ಗಳ ಕೆಲಸಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ ಮತ್ತು ಇದರಂತೆ ಕೆಲಸಗಳನ್ನು ಮಾಡುತ್ತಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ.—ತರಬೇತಿ ಪಡೆಯಲು ಬರುವ ಹರಿಜನರಿಗೆ ಮಾತ್ರ ತರಬೇತಿ ಕೊಡಲಾಗುತ್ತಿದೆ ಎಂದು ಹೇಳಿದಿರಿ. ಆದರೆ ಇದರಂತೆ ಮುನಲ್ಮಾನರು ಹಾಗೂ ಕ್ರಿಶ್ಚಿಯನ್ನರು ತರಬೇತಿಗಾಗಿ ಬಂದರೂ ಅವರಿಗೆ ಅವಕಾಶ ಸಿಗುವುದಿಲ್ಲ ಎಂದು ಕೇಳುತ್ತೇವೆ. ಇದರಿಂದ ಎಲ್ಲರಿಗೂ ಸರಿಯಾದ ಟ್ರೈನಿಂಗು ಕೊಡುವಂತೆ ಎಲ್ಲ ವಿದ್ಯಾರ್ಥಿಗಳನ್ನೂ ತರಬೇತಿಗೆ ಏಕೆ ಸೇರಿಸಿ ಕೊಳ್ಳಬಾರದು?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಮೊದಲು ತರಬೇತಿಗಾಗಿ ಬಹಳ ಕಡಿಮೆ ವಿದ್ಯಾರ್ಥಿಗಳು ಬರುತ್ತಿದ್ದರು. ಈಚೆಗೆ ಮೆಕನೈಸ್ಡ್ ಫಿಷರೀಸ್ ಟ್ರೈನಿಂಗ್ ಪ್ರಾರಂಭ ಮಾಡಿದ ಮೇಲೆ ಇದು ಬಹಳ ಪಾಪ್ಯುಲರ್ ಆಗುತ್ತಿರುವುದರಿಂದ ಹೆಚ್ಚು ಸಂಖ್ಯೆಯಲ್ಲಿ ತರಬೇತಿಗಾಗಿ ಜನ ಬರುತಿದ್ದಾರೆ. ಆದರೆ ಎಲ್ಲರಿಗೂ ತರಬೇತಿ ಕೊಡುವುದಕ್ಕೆ ಆಗುತ್ತಿಲ್ಲ. ಇದಕ್ಕಾಗಿ ಒಂದು ಅಡ್ಮಿಷನ್ ಕಮಿಟಿ ಇದೆ. ಆ ಕಮಿಟಿಯವರು ಎಷ್ಟು ಜನರನ್ನು ಶಿಫಾರಸು ಮಾಡುತ್ತಾರೋ ಅವರಿಗೆ ಮಾತ್ರ ತರಬೇತಿ ಕೊಡಲಾಗುತ್ತಿದೆ. ಇದರಂತೆ ಎಷ್ಟು ಜನರಿಗೆ ತರಬೇತಿ ಕೊಡಲು ಸಾಧ್ಯವೋ ಅಷ್ಟು ಜನರಿಗೆ ಮಾತ್ರ ಕೊಡಲು ಸಾಧ್ಯವಾಗುತ್ತಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮಂತ್ರಿಗಳು ಉತ್ತರದಲ್ಲಿ 89 ಜನ ಹರಿಜನರಿಗೆ ಮಾತ್ರ ಟ್ರೈನಿಂಗು ಕೊಡಲಾಗಿದೆ ಎಂದು ಹೇಳಿದ್ದಾರೆ. ಇಷ್ಟು ಹರಿಜನರಿಗೂ ಟ್ರೈನಿಂಗು ಕೊಟ್ಟ ಮೇಲೆ ಇವರಿಗೆ ಬೇಕಾಗುವ ಮೆಕನೈಸ್ಡ್ ಬೋಟುಗಳನ್ನು ಹಾಗೂ ಇನ್ನಿತರ ಸಲಕರಣೆಗಳನ್ನು ಸರಕಾರದವರು ಕೊಡುವ ವ್ಯವಸ್ಥೆ ಮಾಡಿದ್ದಾರೆಯೇ ! .

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ನಾನಾಗಲೇ ಇವಕ್ಕೆ ಉತ್ತರ ಹೇಳಿದೆ. ಇದರಲ್ಲಿ ಶಿಕ್ಷಣ ಪಡೆದು ತರಬೇತಿ ಪಡೆದು ಬಂದ ಮೇಲೆ ನಾಲ್ಕೈದು ಜನರು ಒಂದು ಗ್ರೂಪ್ ಮಾಡಿಕೊಂಡು ಬರುತ್ತಾರೆ. ಇವರಿಗೆಲ್ಲಾ ಸರಕಾರದಿಂದ ಮೆಕನೈಸ್ಡ್ ಬೋಟನ್ನು ಒದಗಿಸುವ ವ್ಯವಸ್ಥೆ ಮಾಡಿದೆ. ಇನ್‌ಲೆಂಡು ಫಿಶರೀಸ್‌ನಲ್ಲಿ ತರಬೇತಿ ಪಡೆದು ಬಂದವರನ್ನು ಅಲ್ಲಲ್ಲಿ ಅಪರೇಟರುಗಳಾಗಿ ಕೆಲಸಕ್ಕೆ ಸೇರಿಸಲಾಗಿದೆ ಮತ್ತು ನಾನ್ ಎಸ್.ಎಸ್.ಎಲ್.ಸಿ. ಆಗಿರುವವರಿಗೆ ವಾಚ್‌ಮನ್‌ಗಳ ಕೆಲಸ ಕೊಡುವ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಇದರಲ್ಲಿ 89 ಜನ ಹರಿಜನರಿಗೆ ತರಬೇತಿ ಕೊಡಲಾಗಿದೆ ಎಂದು ಇದೆ. ಆದರೆ ಸರಕಾರಕ್ಕೆ ಒಟ್ಟು ಎಷ್ಟು ಜನರು ತರಬೇತಿಗಾಗಿ ಅರ್ಜಿಗಳನ್ನು ಸಲ್ಲಿಸಿದ್ದರು ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಇದರ ವಿವರಗಳು ನನ್ನಲ್ಲಿಲ್ಲ. ಸಾಮಾನ್ಯವಾಗಿ ಎಲ್ಲರಿಗೂ ತರಬೇತಿ ಕೊಡಬೇಕೆಂದು ಇದೆ. ಆದರೆ ಈಚೆಗೆ ಹೆಚ್ಚು ಹೆಚ್ಚು ಜನರು ತರಬೇತಿಗಾಗಿ ಬರುತ್ತಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತರಬೇತಿಗೆ ಬರುವಾಗ ಇಷ್ಟು ಸೀಟುಗಳನ್ನು ಒದಗಿಸಬೇಕು ಎಂದು ಇರುವುದರಲ್ಲಿ ಹರಿಜನರಿಗೆ ಇಷ್ಟೇ ಸೀಟುಗಳನ್ನು ಕೊಡಬೇಕೆಂದು ನಿಗದಿ ಮಾಡಿ ಕೊಡುತ್ತಿಲ್ಲವೇ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಸಾಮಾನ್ಯವಾಗಿ ಇದನ್ನೆಲ್ಲಾ ಅಡ್ಮಿಷನ್ ಕಮಿಟಿಗೇ ಬಿಡಲಾಗಿದೆ. ಅವರೂ ಕೂಡ ಹರಿಜನರಿಗೆ ಶೇಕಡಾ 18ರಷ್ಟು ಸೀಟುಗಳನ್ನು ಕೊಡಬೇಕು ಎಂದು ಇರುವುದನ್ನು ಗಮನದಲ್ಲಿಟ್ಟುಕೊಂಡು ಹಂಚುತ್ತಾರೆ.